ಕರ್ನಾಟಕ ಲೋಕಾಯುಕ್ತ

ಸಂ.ಕಂಪ್ಲೇಂಟ್/ಉಪಲೋಕ್/ಜಿಎಲ್‌ಬಿ/255/2021/ಎಆರ್‌ಇ-20

ಬಹುಮಹಡಿಗಳ ಕಟ್ಟಡ,
ಡಾ:ಅಂಬೇಡ್ಕರ್ ವೀಧಿ,
ಬೆಂಗಳೂರು-560 001,
ದಿನಾಂಕ:06-09-2022

**ಕರ್ನಾಟಕ ಲೋಕಾಯುಕ್ತ ಕಾಯ್ದೆ 1984ರ ಕಲಂ 12 (3) ಅನ್ವಯ ವರದಿ**

ವಿಷಯ: 1ನೇ ಎದುರುದಾರರಾದ ಚಂದ್ರಕಾಂತ್ ಅಂಬುರೆ, (ನಿವೃತ್ತ) ಕಾರ್ಯಪಾಲಕ ಅಭಿಯಂತರರು ಕೆ.ಹೆಚ್.ಬಿ. ಕಲಬುರಗಿ ಮತ್ತು 2ನೇ ಎದುರುದಾರರಾದ ಶ್ರೀ ಸಯ್ಯದ್ ಪೀರ್ ಪಾಷಾ, ಸಹಾಯಕ ಕಾರ್ಯಪಾಲಕ ಅಭಿಯಂತರರು, ಕೆ.ಹೆಚ್.ಬಿ. ಕಲಬುರಗಿ ಇವರುಗಳ ದುರ್ನಡತೆ/ಕರ್ತವ್ಯ ಲೋಪದ ಕುರಿತು.

#####

ಶ್ರೀ ಸಿದ್ದು ಸುಬೇದಾರ್, ಮನೆ ನಂ.1-9/19, ಖೂಬಾ ಪ್ಲಾಟ್, ಕಲಬುರಗಿ ಇವರು (ಇನ್ನು ಮುಂದೆ "ದೂರುದಾರರು" ಎಂದು ಕರೆಯಲ್ಪಡುತ್ತಾರೆ) ರವರು ಎದುರುದಾರರಾದ 1ನೇ ಎದುರುದಾರರಾದ ಚಂದ್ರಕಾಂತ್ ಅಂಬುರೆ, (ನಿವೃತ್ತ) ಕಾರ್ಯಪಾಲಕ ಅಭಿಯಂತರರು ಕೆ.ಹೆಚ್.ಬಿ. ಕಲಬುರಗಿ ಮತ್ತು 2ನೇ ಎದುರುದಾರರಾದ ಶ್ರೀ ಸಯ್ಯದ್ ಪೀರ್ ಪಾಷಾ, ಸಹಾಯಕ ಕಾರ್ಯಪಾಲಕ ಅಭಿಯಂತರರು, ಕೆ.ಹೆಚ್.ಬಿ. ಕಲಬುರಗಿ ವಿರುದ್ಧ ಸಲ್ಲಿಸಿದ ದೂರನ್ನು ಕರ್ನಾಟಕ ಲೋಕಾಯುಕ್ತ ಕಾಯ್ದೆ ಕಲಂ 9ರಡಿಯಲ್ಲಿ ತನಿಖೆಗೆ ತೆಗೆದುಕೊಳ್ಳಲಾಗಿದೆ.

**2. ದೂರಿನ ಸಂಕ್ಷಿಪ್ತ ವಿವರಣೆ:**

ಸದರಿ ದೂರಿನಲ್ಲಿ ಕರ್ನಾಟಕ ಗೃಹ ಮಂಡಳಿ, ಕಲಬರುಗಿ ಇವರು ಬಿದ್ದಪೂರ ಏರ್‌ಪೋರ್ಟ ಲ್ಯಾಂಡ್, ಅಕ್ಕಮಹಾದೇವಿ ಕಾಲೋನಿ, ಶಹಬಾದ್, ಚಿಂಚೋಳ್ಳಿ ಹಾಗೂ ಆಳಂದ, ಆಳಂದ ರಸ್ತೆ, ಕಲಬುರಿಗಿ ಬಡಾವಣೆಯಲ್ಲಿನ ವಿವಿಧ ವರ್ಗಗಳ ಮೂಲೆ ನಿವೇಶನ/ಮಧ್ಯಂತರ ನಿವೇಶನಗಳನ್ನು ಬಹಿರಂಗ ಹರಾಜು ಪ್ರಕ್ರಿಯೆ ಮುಖಾಂತರ ಹರಾಜು ಮಾಡಿದ್ದು ಸದರಿ ಪ್ರಕ್ರಿಯೆಯಲ್ಲಿ ಕರ್ನಾಟಕ ಗೃಹ ಮಂಡಳಿ ನಿಯಮಗಳು 1983ರ ನಿಯಮಗಳನ್ನು ಉಲ್ಲಂಘಿಸಿ ಬಿಡ್ಡುದಾರರಿಂದ ಕೇವಲ ರೂ.5,000/-ಗಳ ಇ.ಎಂ.ಡಿ. ಹಣವನ್ನು ಪಡೆದುಕೊಂಡು ಹರಾಜು ಮಾಡಿರುತ್ತಾರೆಂದು, ಕರ್ನಾಟಕ ಗೃಹ ಮಂಡಳಿ ನಿಯಮಗಳು 1993ರ ಕಂಡಿಕೆ9-ಎರಂತೆ ವಿವಿಧ ಮೀಸಲಾತಿ ಮೂಲಕ ಹಂಚಿಕೆ ಮಾಡದೇ 23 ಜನ ಬಿಡ್ಡುದಾರರಿಗೆ ಹಂಚಿಕೆ ಮಾಡಿದ್ದು ಸದರಿ ಫಲಾನುಭವಿಗಳು ಯಾರೂ ಸಹ ಅರ್ಹ ಫಲಾನುಭವಿಗಳಾಗಿರುವುದಿಲ್ಲವೆಂದು ಆರೋಪಿಸಿರುತ್ತಾರೆ. ಎದುರುದಾರರು ತುರ್ತಾಗಿ ಹರಾಜು

ಪ್ರಕ್ರಿಯೆಯನ್ನು ಕೈಗೊಂಡು ಸರ್ಕಾರಕ್ಕೆ ನಷ್ಟ ಉಂಟು ಮಾಡಿರುತ್ತಾರೆಂದು ಸದರಿಯವರ ವಿರುದ್ಧ ಕ್ರಮಕೈಗೊಳ್ಳಬೇಕೆಂದು ಕೋರಿರುತ್ತಾರೆ.

**3. ಎದುರುದಾರರ ಆಕ್ಷೇಪಣೆ:**

1ನೇ ಎದುರುದಾರರು ದಿನಾಂಕ:22-12-2020ರಂದು ನಡೆದ ಬಹಿರಂಗ ಹರಾಜಿನಲ್ಲಿ 45 ಜನ ಜನರು ಭಾಗವಹಿಸಿದ್ದು ಸದರಿಯವರುಗಳು ರೂ.50,000/-ಗಳ ಇ.ಎಂ.ಡಿ. ಹಣವನ್ನು ಪಾವತಿಸಿ ಹರಾಜಿಗೆ ಮುಂಚೆ ಟೋಕನ್‌ಗಳನ್ನು ಪಡೆದುಕೊಂಡು ಹರಾಜಿನಲ್ಲಿ ಭಾಗವಹಿಸಿದ್ದು, 23 ಜನ ಮಂಡಳಿ ದರಕ್ಕಿಂತ ಹೆಚ್ಚಾಗಿ ಬಿಡ್ ಮಾಡಿ ಯಶಸ್ವಿ ಬಿಡ್ಡುದಾರರಾಗಿರುತ್ತಾರೆಂದು ತಿಳಿಸಿರುತ್ತಾರೆ. ಬಹಿರಂಗ ಹರಾಜು ನಿಯಮಾನುಸಾರ ಯಶಸ್ವಿ ಬಿಡ್ಡುದಾರರಿಗೆ ನಿವೇಶನಗಳ ಬಿಡ್ಡಿನ ಹಣದ ಶೇಖಡಾ 25% ಮೊತ್ತವನ್ನು 72 ಗಂಟೆಗಳ ಒಳಗೆ ಮಂಡಳಿಗೆ ಸಂದಾಯ ಮಾಡಲು ತಿಳಿಸಲಾಗಿತ್ತು. ಅದರಂತೆ ಸದರಿಯವರು, ಸಹಾಯಕ ಕಾರ್ಯಪಾಲಕ ಅಭಿಯಂತರರು ಮತ್ತು ಸಹಾಯಕ ಕಂದಾಯ ಅಧಿಕಾರಿಯವರು ಜಂಟಿಯಾಗಿ ಬ್ಯಾಂಕ್ ದೃಢೀಕರಣ ಪತ್ರ ಪರಿಶೀಲಿಸಿ ದಿನಾಂಕ:29-12-2020ರಂದು ಎಲ್ಲಾ ಯಶಸ್ವಿ ಬಿಡ್ಡುದಾರರಿಗೆ ಸಂದಾಯ ಮಾಡಬೇಕಾದ ಶೇಕಡಾ 75% ಮೊತ್ತವನ್ನು ಮಂಡಳಿಗೆ ಪಾವತಿಸಿ ಕ್ರಯ ಪತ್ರ ಮಾಡಿಕೊಳ್ಳಲು ಸೂಚಿಸಿರುವುದಾಗಿ, ಬಹಿರಂಗ ಹರಾಜು ಮಾರಾಟ ದೃಢೀಕರಣ ಪತ್ರವನ್ನು ವಿತರಿಸಿರುವುದಾಗಿ ತಿಳಿಸಿರುತ್ತಾರೆ. ಸದರಿ ಪತ್ರದ ಪ್ರತಿಯನ್ನು ಮೇಲಾಧಿಕಾರಿಗಳಿಗೆ ಸಲ್ಲಿಸಿರುವುದಾಗಿ ನುಡಿದಿರುತ್ತಾರೆ. ಬಹಿರಂಗ ಹರಾಜಿನಲ್ಲಿ ಯಶಸ್ವಿಯಾಗದ ಬಿಡ್ಡುದಾರರಿಗೆ ಸದರಿಯವರು ಕಟ್ಟಿರುವ ರೂ.50,000/-ಗಳ ಇ.ಎಂ.ಡಿ. ಹಣವನ್ನು ಮರು ಪಾವತಿಸಲಾಗಿರುತ್ತದೆ ಎಂದು ತಿಳಿಸಿರುತ್ತಾರೆ. ದೂರುದಾರರು ಆಪಾದಿಸಿದಂತೆ ಮಂಡಳಿಗೆ ಯಾವುದೇ ಆರ್ಥಿಕ ನಷ್ಟ ಉಂಟಾಗಿರುವುದಿಲ್ಲವೆಂದು ಸದರಿ ಪ್ರಕರಣವನ್ನು ಮುಕ್ತಾಯಗೊಳಿಸಲು ಕೋರಿರುತ್ತಾರೆ.

2ನೇ ಎದುರುದಾರರು ದೂರುದಾರರು ಮಾಡಿರುವ ಆಪಾದನೆಯನ್ನು ನಿರಾಕರಿಸಿರುತ್ತಾರೆ. ಹರಾಜಿನ ದೃಢೀಕರಣ ಪತ್ರಗಳನ್ನು ಕಾರ್ಯಪಾಲಕ ಅಭಿಯಂತರರು ನೀಡಿರುತ್ತಾರೆಂದು, 24 ಯಶಸ್ವಿ ಬಿಡ್ಡುದಾರರಾಗಿದ್ದು, ಉಳಿದ 21 ಜನರಿಗೆ ಅರ್ಜಿ ಮತ್ತು ಇ.ಎಂ.ಡಿ. ಹಣವನ್ನು ಬಹಿರಂಗ ಹರಾಜು ಮುಗಿದ ನಂತರ ಹಿಂದಿರುಗಿಸಲಾಗಿರುತ್ತದೆ ಎಂದು ತಿಳಿಸಿರುತ್ತಾರೆ.

**4. ತನಿಖಾ ವರದಿ:**

ಪೊಲೀಸ್ ಅಧೀಕ್ಷಕರು, ಕಲೋ, ಕಲಬುರಗಿ ಇವರು ಪೊಲೀಸ್ ಇನ್ಸ್‌ಪೆಕ್ಟರ್, ಕರ್ನಾಟಕ ಲೋಕಾಯುಕ್ತ, ಕಲಬುರಗಿ ಇವರು ಸಲ್ಲಿಸಿರುವ ತನಿಖಾ ವರದಿಯನ್ನು ಲಗತ್ತಿಸಿ ಕಳುಹಿಸಿಕೊಟ್ಟಿರುತ್ತಾರೆ. ಪೊಲೀಸ್ ಇನ್ಸ್‌ಪೆಕ್ಟರ್,

ಕಲೋ, ಕಲಬುರಗಿ ಇವರು ದೂರುದಾರರು ಮಾಡಿರುವ ಆಪಾದನೆಯಲ್ಲಿ ತನಿಖೆಯಿಂದ ಸಾಬೀತಾಗಿರುತ್ತದೆ ಎಂದು ತಿಳಿಸಿರುತ್ತಾರೆ.

ದಿನಾಂಕ:15-12-2021ರ ಪ್ರತ್ಯುತ್ತರದಲ್ಲಿ ದೂರುದಾರರು ಎದುರುದಾರರ ಆಕ್ಷೇಪಣೆಗಳನ್ನು ತಿರಸ್ಕರಿಸಬೇಕೆಂದು, ನಿಯಮಗಳನ್ನು ಗಾಳಿಗೆ ತೂರಿ ಸರ್ಕಾರದ ಬೊಕ್ಕಸಕ್ಕೆ ಹಾನಿ ಮಾಡಿದ್ದಾರೆ, ವಂಚನೆ ಮಾಡಿದ್ದಾರೆಂದು ತಿಳಿಸಿರುತ್ತಾರೆ. ಮುಂದುವರೆದು, ದಿನಾಂಕ:01-02-2022ರಂದು ಮತ್ತೊಂದು ಮನವಿ ಪತ್ರವನ್ನು ಸಲ್ಲಿಸಿ ಸದರಿ ಪತ್ರದಲ್ಲಿ ಕರ್ನಾಟಕ ಗೃಹ ಮಂಡಳಿ ನಿವೇಶನ/ಮನೆ ಹಂಚಿಕೆ ನಿಯಮ 1983 ಉಲ್ಲಂಘನೆಯಾಗಿರುವುದಿಲ್ಲವೆಂದು, ನಿಗಧಿತ ದರಕ್ಕಿಂತ ಹೆಚ್ಚಿನ ದರಕ್ಕೆ ನಿವೇಶನಗಳನ್ನು ಮಾರಾಟ ಮಾಡಿರುತ್ತಾರೆಂದು ಪೂರ್ಣಪ್ರಮಾಣದ ದಾಖಲೆಗಳನ್ನು ಪರಿಶೀಲಿಸದೇ ದೂರನ್ನು ಸಲ್ಲಿಸಿದ್ದು ದೂರನ್ನು ಮುಕ್ತಾಯಗೊಳಿಸಲು ವಿನಂತಿಸಿಕೊಂಡಿರುತ್ತಾರೆ.

**5. ಒಟ್ಟಾರೆ ಅಭಿಪ್ರಾಯ:**

ದೂರುದಾರರು ಮಾಡಿರುವ ಆಪಾದನೆ, ಎದುರುದಾರರು ಸಲ್ಲಿಸಿರುವ ಆಕ್ಷೇಪಣೆ ಮತ್ತು ಪೊಲೀಸ್ ಇನ್ಸ್‌ಪೆಕ್ಟರ್, ಕಲೋ, ಕಲಬುರಗಿ ಇವರು ಸಲ್ಲಿಸಿರುವ ತನಿಖಾ ವರದಿ ಹಾಗೂ ದೂರುದಾರರು ಸಲ್ಲಿಸಿರುವ ಪ್ರತ್ಯುತ್ತರಗಳಿಂದ ದೂರುದಾರರು ಮಾಡಿರುವ ಆಪಾದನೆಗಳು ಸಾಬೀತಾಗಿದ್ದು ಅದರ ಅಂಶಗಳು ಈ ಕೆಳಗಿನಂತೆ ಇರುತ್ತವೆ.

1) ಗೃಹ ಆಯುಕ್ತರು, ಕರ್ನಾಟಕ ಗೃಹ ಮಂಡಳಿ, ಬೆಂಗಳೂರು ಇವರ ಸುತ್ತೋಲೆ ಸಂಖ್ಯೆ.ಕಗೃಮಂ/ಉಪ್ರವ್ಯ(ಗ್ರಾಸೇ)/ಹಂಚಿಕೆ/2018-19 ದಿನಾಂಕ:30-12-2019ರಲ್ಲಿ ವಿಧಿಸಿರುವ ಷರತ್ತು ಮತ್ತು ನಿಬಂಧನೆಗಳ ಕ್ರಮ ಸಂಖ್ಯೆ(2)ರಲ್ಲಿ ಎದುರುದಾರರು ಇ-ಹರಾಜು ಕರೆಯದೇ, ವ್ಯಾಪಕ ಪ್ರಚಾರ ಮಾಡದೇ ಗೃಹ ಮಂಡಳಿಯ ನಿಯಮಗಳನ್ನು ಉಲ್ಲಂಘಿಸಿ ಕರ್ತವ್ಯದಲ್ಲಿ ಬೇಜವಾಬ್ದಾರಿತನ ತೋರಿಸಿರುತ್ತಾರೆ.

2) ಗೃಹ ಆಯುಕ್ತರು, ಕರ್ನಾಟಕ ಗೃಹ ಮಂಡಳಿ, ಬೆಂಗಳೂರು ಇವರ ಸುತ್ತೋಲೆ ಸಂಖ್ಯೆ.ಕಗೃಮಂ/ಉಪ್ರವ್ಯ(ಗ್ರಾಸೇ)/ಹಂಚಿಕೆ/2018-19 ದಿನಾಂಕ:30-12-2019ರಲ್ಲಿ ವಿಧಿಸಿರುವ ಷರತ್ತು ಮತ್ತು ನಿಬಂಧನೆಗಳ ಕ್ರಮ ಸಂಖ್ಯೆ(5)ರಲ್ಲಿ ಹರಾಜು ಪ್ರಕ್ರಿಯೆಗೆ ಸಂಬಂಧಿಸಿದಂತೆ ಸ್ಥಳೀಯರಿಗೆ ತಿಳುವಳಿಕೆ ನೀಡಲು ಧ್ವನಿವರ್ಧಕ ಮೂಲಕ ಮತ್ತು ಪ್ರಮುಖ ಸಾರ್ವಜನಿಕ ಸ್ಥಳಗಳಲ್ಲಿ ಹರಾಜಿನ ಬಗ್ಗೆ ಕರಪತ್ರಗಳನ್ನು ಅಂಟಿಸಿರುವ ಹಾಗೂ ಸಾರ್ವಜನಿಕರಿಗೆ ಕರಪತ್ರಗಳನ್ನು ವಿತರಿಸಿರುವ ಬಗ್ಗೆ ಯಾವುದೇ ನಿರ್ದಿಷ್ಟ ದಾಖಲೆಗಳು ಇರುವುದಿಲ್ಲ.

3) ಗೃಹ ಆಯುಕ್ತರು, ಕರ್ನಾಟಕ ಗೃಹ ಮಂಡಳಿ, ಬೆಂಗಳೂರು ಇವರ ಸುತ್ತೋಲೆ ಸಂಖ್ಯೆ.ಕಗೃಮಂ/ಉಪ್ರವ್ಯ(ಗ್ರಾಸೇ)/ಹಂಚಿಕೆ/2018–19 ದಿನಾಂಕ:30–12–2019ರಲ್ಲಿ ವಿಧಿಸಿರುವ ಷರತ್ತು ಮತ್ತು ನಿಬಂಧನೆಗಳ ಕ್ರಮ ಸಂಖ್ಯೆ(8)ರಲ್ಲಿ ದಿನಾಂಕ:22–12–2020ರಂದು ನಡೆದಂತಹ ಹರಾಜಿನಲ್ಲಿ ವಿಡಿಯೋ ಚಿತ್ರೀಕರಣ ಮಾಡಬೇಕಾಗಿದ್ದು ವಿಡಿಯೋ ಚಿತ್ರೀಕರಣ ಮಾಡಿಸದೇ ಎದುರುದಾರರು ಕರ್ತವ್ಯಲೋಪ ಎಸಗಿರುತ್ತಾರೆ.

4) ಗೃಹ ಆಯುಕ್ತರು, ಕರ್ನಾಟಕ ಗೃಹ ಮಂಡಳಿ, ಬೆಂಗಳೂರು ಇವರ ಸುತ್ತೋಲೆ ಸಂಖ್ಯೆ.ಕಗೃಮಂ/ಉಪ್ರವ್ಯ(ಗ್ರಾಸೇ)/ಹಂಚಿಕೆ/2018–19 ದಿನಾಂಕ:30–12–2019ರಲ್ಲಿ ವಿಧಿಸಿರುವ ಷರತ್ತು ಮತ್ತು ನಿಬಂಧನೆಗಳ ಕ್ರಮ ಸಂಖ್ಯೆ(14)ರಲ್ಲಿ ಬಹಿರಂಗ ಹರಾಜಿನ ದಿನದಂದು ಕೇಂದ್ರ ಕಛೇರಿಯ ಹಂಚಿಕೆ ಶಾಖೆ ಹಾಗೂ ಹಣಕಾಸು ಶಾಖೆಗಳ ಪ್ರತಿನಿಧಿಗಳು ಹಾಜರು ಇರುವುದಿಲ್ಲ.

5) ಪ್ರತಿಯೊಂದು ನಿವೇಶನದ ಬಿಡ್ಡಿಂಗ್ ಶೀಟ್‌ನಲ್ಲಿ ಹರಾಜು ಪ್ರಕ್ರಿಯೆಯ ಸಮಯವನ್ನು ನಮೂದು ಮಾಡಬೇಕಾಗಿದ್ದು ಎಲ್ಲಾ 23 ನಿವೇಶನಗಳ ಹರಾಜು ಮಾಡಿರುವ ಸಮಯವನ್ನು 12–30 ಗಂಟೆ ಎಂದು ನಮೂದಿಸಿದ್ದು ಒಂದೇ ಸಮಯದಲ್ಲಿ ಎಲ್ಲಾ ನಿವೇಶನಗಳನ್ನು ಹರಾಜು ಮಾಡಲು ಅಸಾಧ್ಯವಿರುತ್ತದೆ.

6) ಹರಾಜು ನಡವಳಿಯ ಪ್ರತಿಗಳಲ್ಲಿ ಹರಾಜು ಪ್ರಕ್ರಿಯೆ ಆರಂಭದ ಮತ್ತು ಮುಕ್ತಾಯದ ಸಮಯವನ್ನು ನಮೂದು ಮಾಡಿರುವುದಿಲ್ಲ ಹಾಗೂ ಹಾಜರಿದ್ದ ಸಿಬ್ಬಂದಿಯವರ ವಿವರವನ್ನು ನಮೂದು ಮಾಡಿರುವುದಿಲ್ಲ.

7) ದಿನಾಂಕ;22–12–2020ರಂದು ನಡೆದ ಹರಾಜು ಪ್ರಕ್ರಿಯೆಯಲ್ಲಿ ಭಾಗವಹಿಸಿದ 45 ಅರ್ಜಿದಾರರಿಂದ ಇ.ಎಂ.ಡಿ. ಹಣ ರೂ.50,000/–ಗಳನ್ನು ಪಡೆದುಕೊಂಡು ಆಕ್ಸಿಸ್ ಬ್ಯಾಂಕ್, ಸೂಪರ್ ಮಾರ್ಕೆಟ್, ಕಲಬುರಗಿ ಇವರಲ್ಲಿ ಅರ್ಜಿದಾರರ ವತಿಯಿಂದ ಹಣವನ್ನು ಕಟ್ಟಿಸದೇ ತಮ್ಮ ಇಲಾಖಾ ವತಿಯಿಂದ ಹಣವನ್ನು ಕಟ್ಟಿ ನಂತರ ಹೆಸರುಗಳನ್ನು ನೊಂದಾಯಿಸಿ ಟೋಕನ್ ನಂಬರ್ ನೀಡಿರುತ್ತಾರೆ.

8) ದಿನಾಂಕ;22–12–2020ರಂದು ಹರಾಜು ಪ್ರಕ್ರಿಯೆ ನಡೆಸದೇ ಒಟ್ಟು 23 ನಿವೇಶನಗಳನ್ನು ಪ್ರಭಾವಿ ವ್ಯಕ್ತಿಗಳಿಗೆ ಹಂಚಿಕೆ ಮಾಡಿ ಅಧಿಕಾರದ ದುರುಪಯೋಗಪಡಿಸಿಕೊಂಡು ಸಾರ್ವಜನಿಕರಿಗೆ ಮತ್ತು ಸರ್ಕಾರಕ್ಕೆ ವಂಚನೆ ಮಾಡಿರುತ್ತಾರೆ.

ಮೇಲಿನ ಕಾರಣಗಳಿಂದ ಹಾಗೂ ಕಡತವನ್ನು ಪರಿಶೀಲಿಸಿದಾಗ ಎದುರುದಾರರಾದ 1ನೇ ಎದುರುದಾರರಾದ ಚಂದ್ರಕಾಂತ್ ಅಂಬುರೆ, ಕಾರ್ಯಪಾಲಕ ಅಭಿಯಂತರರು ಕೆ.ಹೆಚ್.ಬಿ. ಕಲಬುರಗಿ (ದಿನಾಂಕ;30-12-2020ರಂದು ನಿವೃತ್ತರಾಗಿರುತ್ತಾರೆ) ಮತ್ತು 2ನೇ ಎದುರುದಾರರಾದ ಶ್ರೀ ಸಯ್ಯದ್ ಪೀರ್ ಪಾಷಾ, ಸಹಾಯಕ ಕಾರ್ಯಪಾಲಕ ಅಭಿಯಂತರರು, ಕೆ.ಹೆಚ್.ಬಿ. ಕಲಬುರಗಿ ಇವರು ಸರ್ಕಾರಿ/ಸಾರ್ವಜನಿಕ ಸೇವಕರಾಗಿದ್ದು, ತಮ್ಮ ಕರ್ತವ್ಯ ಪಾಲನೆಯಲ್ಲಿ ಪರಿಪೂರ್ಣ ಕರ್ತವ್ಯನಿಷ್ಠೆಯನ್ನು ತೋರಿಸದೆ ಸಾರ್ವಜನಿಕ ಸೇವಕರಿಗೆ ತರವಲ್ಲದ ರೀತಿಯಲ್ಲಿ ನಡೆದುಕೊಂಡು ಕರ್ನಾಟಕ ನಾಗರೀಕ ಸೇವಾ (ನಡತೆ) ನಿಯಮಗಳು, 1966ರ, ನಿಯಮ 3(1) (i) ರಿಂದ (iii) ರಲ್ಲಿ ಹೇಳಿದಂತೆ ದುರ್ವರ್ತನೆಯಿಂದ ವರ್ತಿಸಿ ಶಿಸ್ತು ಕ್ರಮಕ್ಕೆ ಬಾಧ್ಯರಾಗಿದ್ದಾರೆಂದು ಕಂಡುಬಂದಿರುತ್ತದೆ ಹಾಗೂ 1ನೇ ಎದುರುದಾರರಾದ ಚಂದ್ರಕಾಂತ್ ಅಂಬುರೆ, ಕಾರ್ಯಪಾಲಕ ಅಭಿಯಂತರರು ಕೆ.ಹೆಚ್.ಬಿ. ಕಲಬುರಗಿ ಈಗಾಗಲೇ ಸರ್ಕಾರಿ ಕರ್ತವ್ಯದಿಂದ ದಿನಾಂಕ:30-12-2020ರಂದು ನಿವೃತ್ತಿ ಹೊಂದಿರುವುದರಿಂದ ಸದರಿಯವರ ವಿರುದ್ದ ನಿಯಮ 214(2) (ಬಿ) (ii) ಕರ್ನಾಟಕ ನಾಗರೀಕ ಸೇವಾ ನಿಯಮಗಳ ಪ್ರಕಾರ ಹಾಗೂ ಕರ್ನಾಟಕ ಲೋಕಾಯುಕ್ತ ಕಾಯ್ದೆಯ ಕಲಂ 12(3) ರಡಿಯಲ್ಲಿ ಪ್ರದತ್ತವಾದ ಅಧಿಕಾರದಡಿಯಲ್ಲಿ, ಈ ಮೂಲಕ ಎದುರುದಾರರ ವಿರುದ್ಧ ಶಿಸ್ತು ನಡವಳಿಕೆ ಹೂಡಲು ಮತ್ತು ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿರ್ಬಂಧ ಮತ್ತು ಮೇಲ್ಮನವಿ) ನಿಯಮಗಳು, 1957ರ ನಿಯಮ 14-ಎ ರ ಅಡಿಯಲ್ಲಿ ಇಲಾಖಾ ವಿಚಾರಣೆ ನಡೆಸಲು ಉಪಲೋಕಾಯುಕ್ತರು-2 ರವರಿಗೆ ಒಪ್ಪಿಸುವಂತೆ, ಶಿಸ್ತು ಪ್ರಾಧಿಕಾರಕ್ಕೆ ಶಿಫಾರಸ್ಸು ಮಾಡಿದೆ.

ಮುಂದುವರೆದು, ಕರ್ನಾಟಕ ಲೋಕಾಯುಕ್ತ ಕಾಯ್ದೆ, 1984 ಕಲಂ 12(4)ರ ಪ್ರಕಾರ, ಶಿಸ್ತು ಪ್ರಾಧಿಕಾರವು ಈ ವರದಿಯ ಮೇಲೆ ಕೈಗೊಂಡ ಅಥವಾ ಕೈಗೊಳ್ಳಲು ಉದ್ದೇಶಿಸಿರುವ ಕ್ರಮವನ್ನು ವರದಿ ತಲುಪಿದ ದಿನಾಂಕದಿಂದ ಮೂರು ತಿಂಗಳ ಅವಧಿಯೊಳಗೆ ಈ ಪ್ರಾಧಿಕಾರಕ್ಕೆ ವರದಿ ಸಲ್ಲಿಸತಕ್ಕದ್ದು.

ಸಂಬಂಧಪಟ್ಟ ದಾಖಲೆಗಳನ್ನು ಲಗತ್ತಿಸಿದೆ.

06/9/22

(ನ್ಯಾಯಮೂರ್ತಿ ಕೆ.ಎನ್. ಫಣೀಂದ್ರ)
ಉಪಲೋಕಾಯುಕ್ತರು
ಕರ್ನಾಟಕ ರಾಜ್ಯ.